ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಹೌದು.

ಇ) ಉಚ್ಚ ನ್ಯಾಯಾಲಯದಿಂದ ವರದಿಯಾದಂತೆ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ಅಂಕಿ ಅಂಶಗಳು ಸಮರ್ಥನೀಯವಾಗಿಲ್ಲದಿದ್ದುದರಿಂದ ಪ್ರಸ್ತಾಪವನ್ನು ಮುಂದಕ್ಕೆ ಹಾಕಲಾಯಿತು.

ಶಿಕಾರಿಪುರ ಕಂಬೈನ್ಡ್ ಆಸ್ಪತ್ರೆ ಕಟ್ಟಡದ ನಿರ್ಮಾಣ

೧೨೦. ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರದಲ್ಲಿ ನಡೆಯುತ್ತಿದ್ದ ಸಂಯುಕ್ತ ಆಸ್ಪತ್ರೆ ಕಟ್ಟಡದ ಮೇಲ್ಛಾವಣಿ ಕುಸಿದ ಕಾರಣ ಕಟ್ಟಡದ ಹಿಂಭಾಗದ ಕೆಲಸವನ್ನು ನಿಲ್ಲಿಸಿದ ದಿನಾಂಕ ಯಾವುದು?

ಆ) ಈ ಕೆಲಸ ಪುನಃ ಪ್ರಾರಂಭಿಸಲಾಗಿದೆಯೇ ಹಾಗೂ ಆಸ್ಪತ್ರೆ ಕಟ್ಟಡದ ಪೂರ್ಣ ಕೆಲಸ ಯಾವಾಗ ಮುಗಿಸಲಾಗುವುದು

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ೧೬-೪-೧೯೮೬.

ಆ) ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದ್ದು, ಅದನ್ನು ಆದಷ್ಟು ಜಾಗ್ರತೆ ಪೂರ್ಣಗೊಳಿಸಲಾಗುವುದು

ಆರ್ಥಿಕ ಮಿತವ್ಯಯದ ಕಾರಣ ಸರ್ಕಾರ ಮುಂದಿನ ೩ ವರ್ಷ ಹೊಸ ಹುದ್ದೆಗಳಿಗೆ ನೇಮಕಾತಿ ನಿಲ್ಲಿಸಿರುವುದು

೧೨೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಹಣಕಾಸಿನ ಮಿತವ್ಯಯದ ನೀತಿಯಿಂದ ಸರ್ಕಾರವು ಮುಂದಿನ ೩ ವರ್ಷಗಳಿಗೆ ಸರ್ಕಾರದ ಯಾವುದೇ ಹುದ್ದೆ ಭರ್ತಿ ಮಾಡುವುದಾಗಲಿ ಅಥವಾ ಹೊಸ ಉದ್ಯೋಗ ಕಲ್ಪಿಸುವುದನ್ನು ನಿಲ್ಲಿಸುವಂತೆ ದಿನಾಂಕ ೧೦-೧೧-೧೯೮೭ ರಂದು ಸರ್ಕಾರಿ ಆಜ್ಞೆ ಹೊರಡಿಸಿರುವುದು ನಿಜವೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೊಸ ಹುದ್ದೆಗಳನ್ನು ಸೃಷ್ಟಿಸುವ ಮತ್ತು ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ದಿನಾಂಕ ೧೦-೧೧-೮೭ರ ಆದೇಶವನ್ನು ಮಾರ್ಪಡಿಸಿ ದಿನಾಂಕ ೪-೧-೮೮ರಂದು ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.